ಅಪಾರ ವಿಸ್ತಾರದ ಪ್ರಪಂಚದ ಪರಿಚಯ ಸಹಜವಾಗಿ ನಡೆದುಹೋಗುತ್ತಿತ್ತು. ಅಂತರಿಕ್ಷದ ಹಾರಾಟದ ಹದ, ಆಹಾರದ ಹುಡುಕಾಟ, ಅಪಾಯದ ಅಂದಾಜಿನ ಕುರಿತು ಹೆತ್ತವರಿಂದ ನಿನಗೆ ಪ್ರಥಮ ಪಾಠ ದೊರೆಯುತ್ತಿತ್ತು. ರಕ್ಷಕರಿಲ್ಲದೆ ನೀನೊಬ್ಬಳೇ ಅರಾಜಕ ಅಕಾಶ ಪ್ರವೇಶಿಸುವುದು ಅದೆಷ್ಟು ಅಪಾಯಕಾರಿ ಎಂದು ನನಗೆ ಗೊತ್ತಿತ್ತು. ಅಂಬೆಗಾಲಿನ ಮೊದಲ ಹಾರಾಟದ ತೋಲ ತಪ್ಪುವ ಲಯದಲ್ಲೇ ವೈರಿಗಳು ನಿನ್ನ ದುರ್ಬಲತೆಯನ್ನು ಬಹು ಬೇಗನೆ ಪತ್ತೆ ಹಚ್ಚುವುದರ ಬಗ್ಗೆ ನನಗೆ ಅನುಮಾನವಿರಲಿಲ್ಲ. ಅಗತ್ಯ ಜೀವರಕ್ಷಕ ತರಬೇತಿ ನೀಡುವುದು ಪ್ರಕೃತಿಯ ನಿಗೂಢ ನಿಯಮಗಳ ಅರಿವಿಲ್ಲದ ನನಗೇನು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ನಿನ್ನ ಬೆಳವಣಿಗೆಯ ವೇಗ ನೋಡಿ ನಾನು ತರಬೇತಿ ನೀಡಲು ಮುಂದಾದೆ.

ಹಾರಾಟದ ಮೊದಲ ಹಂತದ ಪ್ರಾಯೋಗಿಕ ಪಾಠ ನಿನ್ನ ವಾಸದ ಕೋಣೆಯಲ್ಲಿ ಆರಂಭವಾಯಿತು. ಮುಂಗೈ ಮೇಲೆ ನಿನ್ನನ್ನು ಕುಳ್ಳಿರಿಸಿ ತುಸು ಎತ್ತರದಿಂದ ಜಿಗಿಯಲು ಅಣಿಗೊಳಿಸಿದೆ. ಕೈ ಆಧಾರ ತಪ್ಪಿದಾಕ್ಷಣ ನೀನು ಆತಂಕದಲ್ಲಿ ರೆಕ್ಕೆ ಬಡಿಯುತ್ತ ಟೇಬಲ್ ಮೇಲೆ, ನೆಲದ ಮೇಲೆ ಕುಪ್ಪಳಿಸಿ ನಿಲ್ಲುತ್ತಿದ್ದೆ. ಮೇಲಿಂದ ಕೆಳಗೆ ಜಿಗಿಯುವ ರೂಢಿಯಾದ ಬಳಿಕ ಕೆಳಗಿನಿಂದ ಮೇಲೆ ನೆಗೆಯುವ ಅಭ್ಯಾಸದ ಪುನರಾವರ್ತನೆಯಾಯಿತು. ಮಗುವೊಂದು ಮೊದಲ ಸಲ ಹೆಜ್ಜೆ ಇಟ್ಟಾಗ ಆಗುವ ತಾಯಿಯ ಸಂಭ್ರಮವನ್ನು ನಾನು ಅನುಭವಿಸಿದೆ. ಒಂದು ದಿನ ನಿನ್ನನ್ನು ತಾರಸಿಯಲ್ಲಿ ಬಿಟ್ಟೆ. ವಿಶಾಲ ಜಗತ್ತನ್ನು ಬೆರಗಿನಿಂದ ನೋಡಿದೆ. ಯಾವುದೊ ಸದ್ದಿಗೆ ಬೆಚ್ಚಿ ನನ್ನ ಮಡಿಲ ಆಸರೆಯಲ್ಲಿ ಅಡಗಿದೆ. ಭಯ, ಬಯಕೆಯ ತಳಮಳದಲ್ಲೆ ಕೆಲ ದಿನ ಉರುಳಿತು. ಒಮ್ಮೆ ಹಲಸಿನ ಮರದಲ್ಲಿ ಕೂತಿದ್ದ ಕಾಗೆಯೊಂದು ನಿನ್ನ ತರಬೇತಿ ಶಿಬಿರದಲ್ಲಿ ನಡೆಯುತ್ತಿದ್ದ ಚಟುವಟಿಕೆಯನ್ನು ನೋಡಿ ತನ್ನ ಬಳಗದವರನ್ನು ಕರೆಯಿತು. ಪ್ರಾಯಶಃ ಆ ಕಾಗೆಗೆ ನೀನು ಮನುಷ್ಯರ ಬಂಧನದಲ್ಲಿದ್ದ ತನ್ನ ಪರಿವಾರದ ಸದಸ್ಯನಂತೆ ಕಂಡಿತೊ ಸುಲಭವಾಗಿ ದಕ್ಕುವ ಬೇಟೆಯಾಗಿ ಕಂಡಿತೊ.. ಅಂತೂ ಸಾಮೂಹಿಕ ಆಕ್ರಮಣದ ಪೂರ್ವ ಕೋಲಾಹಲ ಎಬ್ಬಿಸಿದವು. ಸ್ವಭಾವತಃ ಪುಕ್ಕಲಾದ ನೀನು ಭಯದಿಂದ ಕೋಣೆಯ ಗೂಡನ್ನು ಸೇರಿಕೊಂಡೆ. ಮನೆಯೊಳಗೆ ಪಡಸಾಲೆಯಲ್ಲಿ ನಿನ್ನ ಹಾರಾಟಾದ ರಿಯಾಜು ನಡೆಯಿತು. ನಿನ್ನ ಪ್ರಬುದ್ಧ ಹಾರಾಟ ನೋಡಿ ಧೈರ್ಯದಿಂದ ನಿನ್ನ ವಿಸ್ಮಯ ಲೋಕದ ರಂಗಪ್ರವೇಶಕ್ಕೆ ಒಂದು ದಿನ ನಿಗದಿ ಮಾಡಿದೆ.

ಮಳೆಗಾಲ. ತುಸು ಹೊಳುವಿದ್ದ ಬೆಳಗಿನ ಹೊತ್ತು ನಿನ್ನ ಉಡಾವಣೆಯ ಮುಹೂರ್ತ ನಿಗದಿಯಾಯಿತು. ಬೊಗಸೆಯಲ್ಲಿ ಮುದುಡಿ ಕುಳಿತಿದ್ದ ನಿನಗೆ ಅದಾಗಲೇ ಬೆಳಗಿನ ಉಪಹಾರ ನೀಡಿದ್ದೆ. ತಾರಸಿಯ ಕಟ್ಟೆಯ ಮೇಲೆ ಬಿಟ್ಟೆ. ನಿನ್ನೆದುರಿನ ಜಗತ್ತು ಸ್ವಾತಂತ್ರ್ಯವನ್ನು ಆಚರಿಸುವಂತೆ ಆಹ್ವಾನಿಸುತ್ತಿತ್ತು. ನೀನು ಕ್ಷಣಕಾಲ ಉದ್ವೇಗದಿಂದ ಕಂಪಿಸಿದೆ; ತಡೆಯಲಾರದ ರೋಮಾಂಚನ ನಿನ್ನ ಚಲನವಲನದಲ್ಲಿತ್ತು. ನನಗೂ ತಳಮಳ; ಕಾಗೆ ನಿನ್ನ ಬೆನ್ನಟ್ಟಿದರೆ... ದಿಕ್ಕು ತಪ್ಪಿ ಕಣ್ಮರೆಯಾದರೆ... ಆದರೆ ನೀನು ಒಂದಲ್ಲ ಒಂದು ದಿನ ನಭಕ್ಕೆ ಹಾರಲೇ ಬೇಕಿತ್ತು. ಮೋಹ ಮೀರಿ ತಾರಸಿಯ ಆಚೆಗೆ ನಿನ್ನ ನೂಕಿದೆ. ಪೂರ್ಣ ರೆಕ್ಕೆ ಬಿಚ್ಚಿದಾಗ ನಿನ್ನ ಬಣ್ಣದ ಮೈಮಾಟ ಅದೆಷ್ಟು ಸುಂದರವಾಗಿ ಕಾಣುತ್ತಿತ್ತು! ನೀನು ಬಾಣದಂತೆ ನೇರ ಹಾರಿ ನೂರು ಮೀಟರ್ ದೂರದ ಮನೆಯೊಂದರ ಕಿಟಕಿಯ ಹೊರ ಪಟ್ಟಿಯ ಮೇಲೆ ಕೂತುಬಿಟ್ಟೆ. ಕಾಗೆಯೊಂದು ನಿನ್ನ ಹಿಂಬಾಲಿಸಿ ಪಕ್ಕದಲ್ಲಿ ಹೊಂಚು ಹಾಕಿ ಕಾಯುತ್ತಿತ್ತು. ನಾನು ಸಂಕಟದಲ್ಲಿ ಚಡಪಡಿಸಿದೆ. ಮರುಕ್ಷಣ ನೀನು ಮರಳಿ ಬಂದು ನನ್ನ ತಲೆ ಏರಿದೆ. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ನಿನ್ನ ಮೊದಲ ಯಶಸ್ವಿ ಪ್ರಾಯೋಗಿಕ ಹಾರಾಟವನ್ನು ಹೆಂಡತಿಯ ಬಳಿ ಕೊಂಡಾಡಿದೆ.

ಮರುದಿನ ತಾರಸಿಯಿಂದ ನೀನು ಏಕಾಂಗಿಯಾಗಿ ಪ್ರಪಂಚ ಪರ್ಯಟನಕ್ಕೆ ಹೊರಟು ಹೋದೆ. ಕ್ಷಣಾರ್ಧದಲ್ಲಿ ನನ್ನ ಕಣ್ಣಳತೆಯ ಆಚೆ ಕಣ್ಮರೆಯಾದೆ. ಮಧ್ಯಾಹ್ನವಾದರೂ ಮರಳಲಿಲ್ಲ; ಒಂದೇ ಸಮನೆ ಮಳೆ, ಗಾಳಿ ಇತ್ತು. ರೆಕ್ಕೆ ಒದ್ದೆಯಾಗಿ ಜಡವಾಗಿ ನೀನೆಲ್ಲಿ ಅಪಾಯದಲ್ಲಿ ಸಿಲುಕಿದ್ದೆಯೊ ಎಂದು ಚಿಂತೆಯಾಯಿತು. ಸಂಜೆಯಾದರೂ ನಿನ್ನ ಪತ್ತೆಯಿಲ್ಲ. ನೀನು ಬದುಕಿರುವದರ ಬಗ್ಗೆ ಮರಳಿ ಬರುವುದರ ಬಗ್ಗೆ ನಾವು ನಂಬಿಕೆ ಕಳೆದುಕೊಂಡೆವು. ಮುಸ್ಸಂಜೆಯ ಮಬ್ಬಿನಲ್ಲಿ ನಿರಾಸೆಯಲ್ಲಿ ಕಿಂಚಿತ್ ನಿರೀಕ್ಷೆಯಿಟ್ಟು ಮನೆಯ ಗೇಟಿಗೊರಗಿ ನಿಂತಿದ್ದೆ. ಎದುರಿನ ಮನೆಯ ಕೋಳಿನ ಮೇಲೆ ಮುದುಡಿ ಕೂತಿದ್ದ ಮುದ್ದು ಮರಿ